(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ, ಆಗಲೇ ತಾವು ಪತ್ರವನ್ನು ಕಳುಹಿಸಿಕೊಡಿ ಎಂದು ಹೇಳಿದಿರಿ. ಅದನ್ನು ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ನೋಡಿ ಸರ್ಕಾರದವರು ಕ್ಲಾರಿಫಿಕೇಷನ್ ಕೊಡಲಿ.

SRI D.B. CHANDRA GOWDA:- You cannot dictate terms.

SRI B. SOMASHEKHAR:- You cannot treat us like this.

ಉಪಾಧ್ಯಕ್ಷರು:- ನೀವು ವಿಷಯವನ್ನು ಅವರ ಗಮನಕ್ಕೆ ತಂದಿದ್ದೀರಿ. ನೀವು ಕೊಟ್ಟ ಕಾಗದವನ್ನು ಅವರಿಗೆ ಒಪ್ಪಿಸಿದ್ದೇವೆ. ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಿ ಎಂದೂ ಕೂಡ ಹೇಳಿದ್ದೇವೆ. ಆದರೂ ನೀವು, ತಪ್ಪು ಎಂದು ಒಪ್ಪಿಕೊಳ್ಳಿ, ಈಗಲೇ ಹೇಳಿ, ಎಂದು ಕೇಳುವುದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿದ್ದಾರೆ. ಅವರ ಕ್ಯಾಬಿನೆಟ್ ಮಿನಿಸ್ಟರ್ ಒಬ್ಬರು ಕಾಗದ ಬರೆದು, ಕಾಂಗ್ರೆಸ್ಸಿನ ಅಧ್ಯಕ್ಷರನ್ನು ಕರೆದುಕೊಂಡು ಬನ್ನಿ ಎಂದು ಸಿ ಇ ಒ ಅವರಿಗೆ ಹೇಳುತ್ತಾರೆಂದರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಚಂದ್ರೇಗೌಡರು ಕೂಡ ಹೇಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಕಾಂಗ್ರೆಸ್ಸಿನ ಚುನಾಯಿತ ಸದಸ್ಯರ ಸಮಾವೇಶವನ್ನು ಕರೆಯುವುದಕ್ಕಾಗಿ ಅವರು ಪತ್ರವನ್ನು ಕಳುಹಿಸಿದ್ದಾರೆ. ಆ ಕಾಗದ ಸಿ ಇ ಒ ಗೆ ಹೋಗಿದೆ ಎನ್ನುವುದು ನಿಮ್ಮ ಆಕ್ಷೇಪ. ಸಿ ಇ ಒ ಗೆ ಬರೀ ಇನ್‌ಫಾರ್ಮೇಷನ್‌ಗಾಗಿ ಕಳುಹಿಸಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ಇದರಲ್ಲಿ ನಿಮ್ಮದು ತಪ್ಪಿಲ್ಲವೇ? ಅಂದರೆ ನೀವು ಇದನ್ನು ಕಾಂಗ್ರೆಸ್ಸೀಕರಣಮಾಡುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ: ಆತನಿಗೆ ನಾವು ಮಾಡು ಎಂದು ಹೇಳಿಲ್ಲ. for information.

ಶ್ರೀ ಬಿ. ಸೋಮಶೇಖರ್:- ನಿಮ್ಮ ಪ್ರಕಾರ ಅದು ತಪ್ಪಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನೀವು ಎಲ್ಲಾ ಕಛೇರಿಗಳನ್ನು ಕಾಂಗ್ರೆಸ್ಸೀಕರಣ ಮಾಡುತ್ತಿದ್ದೀರಿ. ಪೊಲೀಸ್ ಕಛೇರಿಗಳು, ರೆವಿನ್ಯೂ ಕಛೇರಿಗಳು ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡುತ್ತಿವೆ. ಅದೇ ರೀತಿ ಝಡ್.ಪಿ. ಮತ್ತು ಇತರ ಎಲ್ಲವನ್ನೂ ಕಾಂಗ್ರೆಸ್ಸೀಕರಣ ಮಾಡುತ್ತಿದ್ದೀರಿ. ಕಾನೂನು ಸಚಿವರಾಗಿ ನೀವು ಇದನ್ನು ಒಪ್ಪುತ್ತಿದ್ದೀರಲ್ಲಾ. ನೀವು ಇದನ್ನು ಸರಿ ಎಂದು ಹೇಳುತ್ತಿದ್ದೀರಲ್ಲಾ, ನಿಮ್ಮ ಈ ಒಂದು ಧೋರಣೆ ಸರಿಯಲ್ಲ. ಹಾಗಾಗಿ ನಾವು ಇದನ್ನು ಪ್ರೊಟೆಸ್ಟ್ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ಬಿ ಜೆ ಪಿ ಯ ಸದಸ್ಯರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)